ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 1, March-April 2026, Pp. 18-25
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಆಧುನಿಕ ಕಥಾಸಾಹಿತ್ಯದಲ್ಲಿ ಮಹಿಳಾ ಸಂವೇದನೆ

**ಡಾ. ಜಯದೇವ ಸಿರಳ್ಳಿ**
ಕನ್ನಡ ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಾವೇರಿ (ಗಾಂಧಿಪುರ)

***Abstract:***
*ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರ ಅನುಭವ ಮಂಟಪದಲ್ಲಿ ಸುಮಾರು ಮಹಿಳಾ ವಚನಗಾರ್ತಿಯರಿದ್ದರು. ಅವರಲ್ಲಿ ಅಕ್ಕಮಹಾದೇವಿ, ಸತ್ಯಕ್ಕ, ಗಂಗಾಂಬಿಕೆ, ನೀಲಾಂಬಿಕೆ ಮುಂತಾದವರು ಶ್ರೇಷ್ಠ ವಚನಗಳನ್ನು ರಚಿಸಿದ್ದಾರೆ. ನಂತರ ಬಂದ ಅತ್ತಿಮಬ್ಬೆ ಜೈನ ಬಸದಿಗಳನ್ನು ಕಟ್ಟಿಸಿದಳು. ಕಂತಿ ಕನ್ನಡದ ಪ್ರಥಮ ಕವಯಿತ್ರಿಯಾದರೆ, ಅಕ್ಕಮಹಾದೇವಿ ಪ್ರಥಮ ಬಂಡಾಯ ವಚನಗಾರ್ತಿಯಾದಳು. ಸ್ವಾತಂತ್ರ್ಯ ಪೂರ್ವದಲ್ಲಿ ತಿರುಮಲೆ ರಾಜಮ್ಮ, ಕೊಡಗಿನ ಗೌರಮ್ಮ ಇವರು ರಚಿಸಿದ ಸಾಹಿತ್ಯ ಇಂದಿಗೂ ಪ್ರಸಿದ್ಧಿ ಪಡೆದಿವೆ. ಮಹಿಳೆಯರು ಜನಪದ ಸಾಹಿತ್ಯಕ್ಕೆ ನೀಡಿದ ಕೊಡುಗೆ ಅಪಾರವಾದುದಾಗಿದೆ. ನಂತರ ಹೊಸಗನ್ನಡ ಸಾಹಿತ್ಯದಲ್ಲಿ ತಿರುಮಲಾಂಬ, ಶಾಮಲಾದೇವಿ ಬೆಳಗಾಂವ್ಕರ್, ತ್ರಿವೇಣಿ, ಎಂ ಕೆ ಇಂದಿರಾ, ಅನುಪಮಾ ನಿರಂಜನ, ವೀಣಾ ಶಾಂತೇಶ್ವರ, ನೇಮಿಚಂದ್ರ, ಸಾರಾ ಅಬೂಬಕರ್, ಬಿ.ಟಿ. ಲಲಿತಾ ನಾಯಕ್, ಗೀತಾ ನಾಗಭೂಷಣ್, ಕಮಲಾ ಹಂಪನಾ, ವಿನಯಾ ಒಕ್ಕುಂದ ಹೀಗೆ ಕನ್ನಡದ ಅನೇಕ ಕಥೆಗಾರ್ತಿಯರು ಕಥೆಗಳನ್ನು ರಚಿಸುವುದರ ಮೂಲಕ ಸಮಾಜದಲ್ಲಿರುವ ಪುರುಷ ಪ್ರಧಾನ ಸಮಾಜದ ಅಸಮಾನತೆಯನ್ನು ಹೋಗಲಾಡಿಸಲು ದಿಟ್ಟತನದಿಂದ ಹೋರಾಡುತ್ತ ಬಂದಿದ್ದಾರೆ.*

***Keywords:*** *ಕಥಾ ಸಾಹಿತ್ಯ, ಮಹಿಳಾ ಕವಿಯಿತ್ರಿಯರು, ಶೋಷಣೆ, ಸಮಾನತೆ, ಮಹಿಳಾ ಸಬಲೀಕರಣ*

**ಪೀಠಿಕೆ**

ಆಧುನಿಕ ಕನ್ನಡ ಕಥಾ ಸಾಹಿತ್ಯದಲ್ಲಿ ಮಹಿಳಾ ಸಂವೇದನೆಯು ಅತ್ಯಂತ ಪ್ರಮುಖವಾದ ಆಯಾಮವಾಗಿದೆ. ಇದು ಕೇವಲ ಮಹಿಳೆಯರ ಸಮಸ್ಯೆಗಳನ್ನು ಚಿತ್ರಿಸದೆ ಸಮಾಜದಲ್ಲಿ ನೆಲೆಯೂರಿದ ಸಮಸ್ಯೆಗಳನ್ನು ಚಿತ್ರಿಸುವುದಾಗಿದೆ. ಜೊತೆಗೆ ಸಮಾಜವನ್ನು ಮತ್ತು ಸಂಬಂಧವನ್ನು ಮಹಿಳೆಯ ದೃಷ್ಟಿಕೋನದಿಂದ ಮರುಸ್ಥಾಪಿಸುವ ಒಂದು ಪ್ರಕ್ರಿಯೆಯಾಗಿದೆ. ಪುರುಷ ಪ್ರಧಾನ ಸಮಾಜದ ಚೌಕಟ್ಟನ್ನು ಮೀರಿ ಮಹಿಳೆಯರು ತಮ್ಮದೇ ಆದ ಶೈಲಿಯಲ್ಲಿ ಬದುಕಿನ ಸಂಕೀರ್ಣತೆಗಳನ್ನು ತಮ್ಮ ಸಾಹಿತ್ಯದಲ್ಲಿ ಅಭಿವ್ಯಕ್ತಗೊಳಿಸುತ್ತಿದ್ದಾರೆ.

**ಮಹಿಳಾ ಸಂವೇದನೆಯ ಪ್ರಮುಖ ಆಯಾಮಗಳು**

1. ***ಅಸ್ಮಿತೆಯ ಹುಡುಕಾಟ–*** ಪರಂಪರಾಗತವಾಗಿ ಬಂದ ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣಿಗೆ ಇದ್ದ ಮಗಳು, ಹೆಂಡತಿ, ತಾಯಿ, ಸಹೋದರಿ ಎಂಬ ಗುರುತುಗಳನ್ನು ಮೀರಿ ತನಗೊಂದು ಸ್ವತಂತ್ರವಾದ ಅಸ್ಮಿತೆಯನ್ನು ಕಂಡುಕೊಳ್ಳುವ ಪ್ರಯತ್ನಗಳು ಕಥೆಗಳಲ್ಲಿ ಕಂಡು ಬರುತ್ತವೆ.

***Please cite this article as:*** ಜಯದೇವ ಸಿರಳ್ಳಿ. (2026). ಆಧುನಿಕ ಕಥಾ ಸಾಹಿತ್ಯದಲ್ಲಿ ಮಹಿಳಾ ಸಂವೇದನೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 5(1), 18–25

2. ***ದೇಹ ಮತ್ತು ಮನಸ್ಸಿನ ಸ್ವಾತಂತ್ರ್ಯ*** – ಮಹಿಳೆಯ ದೇಹ ಮತ್ತು ಲೈಂಗಿಕತೆಯನ್ನು ಕೇವಲ ಭೋಗದ ವಸ್ತುವಾಗಿ ನೋಡದೆ, ಆಕೆಯ ಭಾವನೆಗಳು, ಬಯಕೆಗಳು ಮತ್ತು ನಿರ್ಧಾರಗಳಿಗೆ ಗೌರವ ನೀಡುವ ಕಥಾ ವಸ್ತುವನ್ನು ಹೊಂದಿರುವ ಕೃತಿಗಳು ಮುಂಚೂಣಿಗೆ ಬಂದವು.

3. ***ಕೌಟುಂಬಿಕ ಮತ್ತು ಸಾಮಾಜಿಕ ಪ್ರತಿರೋಧ*** – ಪಿತೃ ಪ್ರಧಾನ ಸಮಾಜ ವ್ಯವಸ್ಥೆಯಲ್ಲಿ ಹೇರುವ ಕಟ್ಟುಪಾಡುಗಳು ಮೂಢನಂಬಿಕೆಗಳು ಮತ್ತು ಶೋಷಣೆಗಳ ವಿರುದ್ಧ ಧ್ವನಿ ಎತ್ತುವಿಕೆ ಹಾಗೂ ಬಂಡಾಯದ ಮನೋಭಾವನೆ ಬೆಳೆಸುವ ಸಾಹಿತ್ಯ ರಚನೆಯಾಯಿತು.

4. ***ಉದ್ಯೋಗಸ್ಥ ಮಹಿಳೆಯರ ಸಂಘರ್ಷ*** – ಆಧುನಿಕ ಜಗತ್ತಿನಲ್ಲಿ ಶಿಕ್ಷಣ ಮತ್ತು ಉದ್ಯೋಗ ಪಡೆದ ಮಹಿಳೆ ಮನೆಯ ಒಳಗಿನ ಜವಾಬ್ದಾರಿ ಹಾಗೂ ಹೊರಗಿನ ವೃತ್ತಿ ಬದುಕಿನ ನಡುವೆ ಎದುರಿಸುವಂತಹ ಮಾನಸಿಕ ಒತ್ತಡಗಳ ಚಿತ್ರಣಗಳು ಕಥಾ ಸಾಹಿತ್ಯದಲ್ಲಿ ಮೂಡಿಬಂದಿವೆ.

ಕೇವಲ ಸ್ತ್ರೀಯರಲ್ಲದೆ ಪುರುಷ ಬರಹಗಾರರು ಪ್ರಾರಂಭದಲ್ಲಿ ಮಹಿಳೆಯರ ದುಃಖ ದುಮ್ಮಾನಗಳನ್ನು ಕರುಣಾ ಜನಕವಾಗಿ ಚಿತ್ರಿಸುತ್ತಿದ್ದರು. ಆದರೆ ನಂತರದ ದಿನಗಳಲ್ಲಿ ಸ್ವತ ಮಹಿಳೆಯರೇ ಬರೆಯಲು ತೊಡಗಿದಾಗ ಕಥೆಗಳಿಗೆ ನೈಜ ಬಣ್ಣ ಬಂದಿತು. ದಲಿತ ಬಂಡಾಯ ಸಾಹಿತ್ಯ ಘಟ್ಟದಲ್ಲಿ ಮಹಿಳಾ ಸಂವೇದನೆಯು ಕೇವಲ ಮೇಲ್ಜಾತಿಯ ಮಹಿಳೆಯರ ಸಮಸ್ಯೆಗೆ ಸೀಮಿತವಾಗದೆ, ಶೋಷಿತ ವರ್ಗದ ಮಹಿಳೆಯರ ಶೋಷಣೆಯನ್ನು ತೀವ್ರವಾಗಿ ಪ್ರಶ್ನಿಸಲಾಯಿತು.

ಬಹಳ ಹಿಂದಿನಿಂದಲೂ ಮಹಿಳೆಯರು ಕಥೆ ಹೇಳುವುದು ಮತ್ತು ಕೇಳುವುದು ನಡೆದುಕೊಂಡು ಬಂದಿದೆ. ಆದರೆ ಮಹಿಳೆಯರ ಕಥೆಗಳು ನೆಲೆಗೊಂಡಿದ್ದು ಇಪ್ಪತ್ತನೆಯ ಶತಮಾನದಲ್ಲಿ ಎಂಭತ್ತು ವರ್ಷಗಳಲ್ಲಿ ಮಹಿಳಾ ಕಥಾ ಸಾಹಿತ್ಯಕ್ಕೂ ಒಂದು ಪರಂಪರೆ ನಿರ್ಮಿತವಾಗಿದೆ. ಇವರಲ್ಲಿ ನಾಲ್ಕು ಪೀಳಿಗೆಗಳನ್ನು ಗುರುತಿಸಬಹುದು.

**ಮೊದಲಿನ ಪೀಳಿಗೆ:** ಮೊದಲಿನ ಪೀಳಿಗೆಯವರು ಎದುರಿಸಿದುದು ಸಾಮಾಜಿಕ ಸಮಸ್ಯೆ. ತಾವು ಸಮಾಜದಲ್ಲಿ ಕಂಡು ಅನುಭವಿಸಿದ ಚಿತ್ರಗಳನ್ನೇ ಲೇಖಕಿಯರು ಕೊಡುತ್ತಿದ್ದುದರಿಂದ ವಾಸ್ತವ ಅನುಸರಣೆ ಅವರಿಗೆ ಅವಶ್ಯ ಎನಿಸಿತು. ಪುರುಷ ಪ್ರಧಾನ ಸಮಾಜದಲ್ಲಿ ಸ್ತ್ರೀ ಒಬ್ಬ ವ್ಯಕ್ತಿಯಾಗಿ ಗುರುತಿಸಲ್ಪಡದೆ ಪತ್ನಿ, ವಿಧವೆ, ವೇಶ್ಯೆ ಹೀಗೆ ಪುರುಷನ ಸಂಬಂಧದಲ್ಲಿ ಗುರುತಿಸಲ್ಪಟ್ಟಿದ್ದರಿಂದ ಅವಳಿಗೆ ಸ್ವತಂತ್ರ ಅಸ್ತಿತ್ವವಾಗಲಿ, ಅದರ ಕಲ್ಪನೆಯಾಗಲಿ ಇರಲಿಲ್ಲ. ಹೀಗಾಗಿ ಕಥೆಗಳು ಪ್ರತಿಭಟನಾತ್ಮಕ ಸ್ವರೂಪದಿಂದ ಕೂಡಿದ್ದವು. ತಿರುಮಲಾಂಬ ಅವರು ಪೌರಾಣಿಕ ಕಥೆಗಳನ್ನು ಬರೆದರು. ಉತ್ತರ ಕರ್ನಾಟಕದಲ್ಲಿ ಶಾಮಲಾದೇವಿ, ಕೊಡಗಿನ ಗೌರಮ್ಮ, ದಕ್ಷಿಣ ಕನ್ನಡದಲ್ಲಿ ಸರಸ್ವತಿ ರಾಜವಾಡೆ ಸಣ್ಣ ಕಥೆಯ ಆದ್ಯರೆಂದು ಹೇಳಬಹುದು. ಇವರು ಮೊದಲಿನ ಪೀಳಿಗೆ ಲೇಖಕರು.

**ಎರಡನೇಯ ಪೀಳಿಗೆ:** ಎರಡನೆ ಪೀಳಿಗೆಯಲ್ಲಿ ಕ್ರಾಂತಿಕಾರಕ ಬದಲಾವಣೆ ಕಾಣದೆ ಹೋದರು, ವ್ಯವಸ್ಥೆಯ ವಿರುದ್ಧ ದನಿ ಎತ್ತುವುದರ ಮೂಲಕ ಪ್ರತಿಭಟನೆಯನ್ನು ತಮ್ಮ ಕಥೆಯಲ್ಲಿ ತಂದರು. ಈ ಬೆಳವಣಿಗೆಯನ್ನು ಅನುಪಮಾ ನಿರಂಜನ, ತ್ರಿವೇಣಿಯವರ ಕಥೆಗಳಲ್ಲಿ ಕಾಣಬಹುದು. ವೈಜ್ಞಾನಿಕ ಮನೋಭಾವನೆಯನ್ನು ಹೊಂದಿದ ಇವರು ಸಣ್ಣ ಕತೆಯ ಹೊಸ ಆಳ–ವಿಸ್ತಾರ ಒದಗಿಸಿದರು. ಆದರೆ ಕಥೆಗಳಲ್ಲಿ ಆಶಾವಾದ ಸೀಮಿತವಾಗಿ ಕಾಣಿಸಿಕೊಂಡಿತು.

**ಮೂರನೆಯ ಪೀಳಿಗೆ:** ಸ್ವಾತಂತ್ರ್ಯೋತ್ತರದಲ್ಲಿ ಬದುಕಿನ ಸಂಕೀರ್ಣತೆಯನ್ನು ಕಥೆಗಳಲ್ಲಿ ಮೂಡಿಸಲು ಆಸಕ್ತಿ ತೋರಿದರು. ರಾಜಲಕ್ಷ್ಮಿ ಎನ್ ರಾವ್ ಹಾಗೂ ವೀಣಾ ಶಾಂತೇಶ್ವರ ರವರ ಕಥೆಗಳಲ್ಲಿ ಅಂತರ್ಮುಖತೆ, ಆತ್ಮಪ್ರಜ್ಞೆ, ದ್ವಂದ್ವಗಳ

ಅರಿವು, ನವ್ಯ ಮನೋಧರ್ಮದ ಅವಿಸ್ಕಾರಗಳನ್ನು ಕಾಣಬಹುದು. ಇವರು ಕಥಾ ಮಾದ್ಯಮವನ್ನು ಕೇವಲ ಮನರಂಜನೆಗೆ, ಬಳಸದೆ ಸತ್ಯದ ಶೋಧದಂಥ ಗಂಭೀರ ಪ್ರಯತ್ನಗಳಲ್ಲಿ ತೊಡಗಿದರು.

**ನಾಲ್ಕನೆಯ ಪೀಳಿಗೆ :** 1980 ನಂತರದ ಕಥೆಗಾರ್ತಿಯರು ಸ್ತ್ರೀ ಮುಕ್ತಿ ಚಳುವಳಿಗಳಿಂದ ಪ್ರಭಾವಿತರಾದರು. ಶಿಕ್ಷಣ ಪಡೆದ ಮಹಿಳೆಗೆ ಅನುಭವದ ವ್ಯಾಪ್ತಿ ವೈವಿಧ್ಯತೆಗಳನ್ನು ಹೊಂದಿದೆ. ವೈದೇಹಿ, ಸಾ.ರಾ. ಅಬೂಬಕರ್ ನೇಮಿಚಂದ್ರರಂತ ಹೊಸ ತಲೆಮಾರಿನ ಲೇಖಕರಿಗೆ ತಮ್ಮ ಪರಿಸರದ ಸಾಂಸ್ಕೃತಿಕ ಹಾಗೂ ಚಾರಿತ್ರಿಕ ಸ್ವರೂಪದ ಅರಿವಿರುವುದರಿಂದ ಇವರ ಕಥೆಗಳು ಮೊದಲಿನವರ ಕಥೆಗಳಿಗಿಂತ ಭಿನ್ನವಾಗಿವೆ.

**ಪ್ರಮುಖ ಕತೆಗಾರ್ತಿಯರ ಕಥೆಗಳಲ್ಲಿ ಮಹಿಳಾ ಸಂವೇದನೆ**

ಡಿ ಆರ್ ನಾಗರಾಜ್ ರವರು ಸ್ತ್ರೀವಾದಿ ಸಾಹಿತ್ಯದ ಮೂರು ರಚನೆಗಳನ್ನು ಗುರುತಿಸಿದ್ದಾರೆ. ಅವುಗಳೆಂದರೆ 1. ಪುರುಷ ಸ್ಥಿರೀಕರಣ 2. ಪುರುಷ ಸ್ತ್ರೀ ಸಮಸ್ಯಾತ್ಮಕ ರಚನೆಗಳು 3. ಸ್ತ್ರೀ ಸಮೃದ್ಧತೆಯ ರಚನೆಗಳು. ಮಹಿಳೆಯರ ಸಣ್ಣ ಕಥೆಗಳನ್ನು ಕುರಿತು ಹೇಳುವುದಾದರೆ ಎರಡನೆಯ ಪ್ರಕಾರದ ರಚನೆಗಳೇ ಹೆಚ್ಚಿನ ಪ್ರಮಾಣದಲ್ಲಿ ಕಂಡು ಬರುತ್ತವೆ.

'ಮಹಿಳಾ ಸಾಹಿತ್ಯದಲ್ಲೂ ಲೇಖಕಿಯರು ಮಧ್ಯಮ ವರ್ಗದಿಂದ ಬಂದವರು. ಅವರ ಕಥೆಗಳ ಸಾಂಸ್ಕೃತಿಕ ಪರಿಸರದಲ್ಲಿ ವೈವಿಧ್ಯತೆ ಇರುವುದಿಲ್ಲ. ಆದರೆ ಕನ್ನಡ ಸಂಸ್ಕೃತಿ ಬಹುರೂಪಿಯಾದುದು ಹಾಗೂ ಈ ಬಹುರೂಪಿತ್ವವನ್ನು ಲೆಕ್ಕಿಸದೆ ಯಾವ ಆಯ್ಕೆಯೂ ಸಮರ್ಪಕ ಎನಿಸದು ಎನ್ನುತ್ತಾರೆ ಜಿ.ಎಸ್ ಅಮೂರರು. ಸ್ತ್ರೀಯರು ಸಹ ಪುರುಸರಂತೆ ಸಣ್ಣ ಕಥೆಯ ಪ್ರಯೋಗಶೀಲರಾಗಿದ್ದಾರೆಂದು ಹೇಳಬಹುದು.

**ತಿರುಮಲಾಂಬ**

ತಿರುಮಲಾಂಬ ಅವರ "ಪ್ರಕಟವಾದ 'ಸಚ್ಚರಿತ ಸುಧಾರ್ಣವ' ಕಥಾ ಸಂಕಲನವು 1925 ರಲ್ಲಿ"[1] ಪ್ರಕಟವಾಗಿದೆ. ಈ ಕಥಾ ಸಂಕಲನದಲ್ಲಿ ಪರಶುರಾಮ, ಭೀಷ್ಮ, ಪುರು, ಸುಕನ್ಯೆ ಹಾಗೂ ಲೋಪ ಮುದ್ರೆಯರ ಏಳು ಕಥೆಗಳಿವೆ. ಪೌರಾಣಿಕ ಕಥೆಗಳು ಸಣ್ಣ ಕಥೆಗಳಾಗಬಹುದೆಂದು ಮಾಸ್ತಿಯವರು ತೋರಿಸಿಕೊಟ್ಟಿದ್ದಾರೆ. ಇವು ಸಣ್ಣಕಥಾ ಪ್ರಕಾರಕ್ಕೆ ಸೇರುವುದಿಲ್ಲ, ಆದರೂ ಕಥೆಗಳಾಗಿ ಗುರುತಿಸಿಕೊಳ್ಳುತ್ತವೆ. ಇವರದು ಪುರುಷ ಸ್ಥಿರೀಕರಣದ ರಚನೆಗಳು.

**ಶ್ಯಾಮಲಾದೇವಿ ಬೆಳಗಾಂವ್ಕರ**

ಶ್ಯಾಮಲಾದೇವಿ ಬೆಳಗಾಂವ್ಕರ ಇವರು ಉತ್ತರ ಕರ್ನಾಟಕದ ಪ್ರಥಮ ಕಥೆಗಾರ್ತಿಯಾಗಿದ್ದಾರೆ. ಮಹಿಳಾ ಸಂಘಟನೆಯಲ್ಲಿ ತೊಡಗಿಸಿಕೊಂಡವರು. ಸಾರ್ವಜನಿಕ ಜೀವನದೊಂದಿಗೆ ನೇರ ಸಂಬಂಧ ಹೊಂದಿದವರು. ಇವರ ಕಥೆ "ಕರುಳು ಕತ್ತರಿ" ಯು ಕೌಟುಂಬಿಕ ಸಮಸ್ಯೆಗೆ ಸೀಮಿತವಾಗಿಲ್ಲ. ಹೆಣ್ಣಿನ ಶೋಷಣೆಯೇ ಈ ಕಥೆಯ ವಸ್ತುವಾದರೂ ಲೇಖಕಿ ನಿರ್ವಹಿಸುವ ರೀತಿಯಲ್ಲಿ ಹೊಸತನವಿದೆ. ಕಥಾ ನಾಯಕಿ ತಾಯಿಯಿಂದಲೇ ಶೋಷಣೆಗೆ ಒಳಗಾಗುತ್ತಾಳೆ. ತಾಯಿ ಅವಳನ್ನು ವೇಶ್ಯಾವೃತ್ತಿಗೆ ತಳ್ಳಿದರೆ, ತಂದೆ ವೇಶ್ಯೆಯಾಗಿ ಅವಳು ಗಳಿಸಿದ ಹಣವನ್ನು ಮೋಸದಿಂದ ಅಪಹರಿಸುತ್ತಾನೆ. ಅಲ್ಲದೆ ಅವಳ ದುರಂತಕ್ಕೂ ಕಾರಣನಾಗುತ್ತಾನೆ. ಇದು ಸಹಜವಾದ ಚಿತ್ರಣವಾಗಿದ್ದು, ಕಥೆಯಲ್ಲಿ ಲೇಖಕರು ಸಾಂಪ್ರದಾಯಿಕ ತಂತ್ರವನ್ನೇ ಬಳಸಿದ್ದಾರೆ.

**ಕೊಡಗಿನ ಗೌರಮ್ಮ**

ಕೊಡಗಿನ ಗೌರಮ್ಮನವರಿಗೆ ಪಾಶ್ಚಾತ್ಯ ಸಾಹಿತ್ಯದಲ್ಲಿ ಆಸಕ್ತಿ ಮತ್ತು ಶ್ರೇಷ್ಠ ಕಥೆಗಳ ಪರಿಚಯವಿತ್ತು. ಅವರು ತಮ್ಮ ಕಥೆಗೆ ಬಳಸಿದ ತಂತ್ರ ಹೊಸದು. ಆಧುನಿಕತೆಯ ಮುಖ್ಯ ಲಕ್ಷಣಗಳಲ್ಲಿ ಒಂದಾದ ಅಂತರ್ಮುಖತೆ ಇವರ ಕಥೆಯ ಜೀವಾಳವಾಗಿದೆ.

'ಮಾನಸ ವ್ಯಾಪಾರಗಳ ಹೇಳಿಕೆ' ಗೌರಮ್ಮನವರ ವೈಶಿಷ್ಟ್ಯ ಎಂದು ಬೇಂದ್ರೆಯವರು ಹೇಳಿದ್ದಾರೆ. ಗೌರಮ್ಮನವರು ಮುಖ್ಯವಾಗಿ ಕಂಬನಿ ಮತ್ತು ಚಿಗುರು, ಚಿಗುರು ಮತ್ತು ಗೌರಮ್ಮನ ಕಥೆಗಳು ಎಂಬ ಕಥಾ ಸಂಕಲನಗಳನ್ನು ರಚಿಸಿದ್ದಾರೆ.

'ಕಂಬನಿ ಮತ್ತು ಚಿಗುರು' ಕಥಾಸಂಕಲನದಲ್ಲಿ ವಾಣಿಯ ಸಮಸ್ಯೆ, ಸನ್ಯಾಸಿ ರತ್ನ, ಒಂದು ಪುಟ್ಟ ಚಿತ್ರ, ಅವಳ ಭಾಗ್ಯ, ಕೌಶಲ್ಯಾನಂದನ, ನಾಲ್ಕು ಘಟನೆಗಳು, ಸುಳ್ಳು ಸ್ವಪ್ನ, ಯಾರು?, ಮನುವಿನ ರಾಣಿ ಎಂಬ ಹೆಣ್ಣು ಮಕ್ಕಳಿಗೆ ಸಂಬಂಧಿಸಿದ ಹನ್ನೆರಡು ಕಥೆಗಳಿವೆ. ಅದೇ ರೀತಿ "ಚಿಗುರು" ಕಥಾ ಸಂಕಲನದಲ್ಲಿ ಕೆಲವು ಕಾಗದಗಳು, ಅಹುತಿ, ಒಂದು ಚಿತ್ರ, ಪಾಪನ ಮದುವೆ, ಅದೃಷ್ಟದ ಆಟ, ನನ್ನ ಮದುವೆ, ಮರದ ಗೊಂಬೆ, ಮುನ್ನಾದಿನ ಎಂಬ ಒಂಭತ್ತು ಕಥೆಗಳಿವೆ. "ಚಿಗುರಿನೊಳಗಿನ ಎಲ್ಲ ಕಥೆಯ ವಸ್ತು ಚಿರಂತರವಾದ ವಸ್ತು. ಅದು ಗಂಡು ಹೆಣ್ಣಿನೊಳಗಿನ ಪರಸ್ಪರ ಆಕರ್ಷಣೆ, ಒಲವು ದಾಂಪತ್ಯ ದುರಂತವೋ ಸುಖ ಮುಕ್ತಿಯೋ ದೇವರೇ ಬಲ್ಲ. ವಾಲ್ಮೀಕಿ ಮುನಿಯು ಕ್ರೌಂಚ ಮಿಥುನದಲ್ಲಿ ಕಂಡು ರಾಮಾಯಣದ ತುಂಬೆಲ್ಲ ಮಿಡುಕಿ ಬರೆದ ಮೂಲ ವಸ್ತುವೆಂದರೆ ಸುಖ ದಾಂಪತ್ಯ ದರ್ಶನ. ಅದರ ಆಗು ಹೋಗು ಅದರ ಸರಸ ವಿರಸ ಅದರ ವಿಧಿ–ವಿಲಾಸ ದೈವ ದುರ್ವಿಪಾಕ. ತಂಗಿ ಗೌರಮ್ಮನವರ ಹೆಣ್ಣು ಹೃದಯ ಈ ವಸ್ತುವನ್ನೇ ಮುಗ್ಧ ಅಪೇಕ್ಷೆಯಿಂದ ಪ್ರೌಢ ವಿವೇಕದಿಂದ ಸುಧಾರಕ ದೃಷ್ಟಿಯಿಂದ ಅವರಿಗೆ ಸಹಜವಾಗಿ ಬೆಳೆಯಲಿರುವ ಸಮತೂಕದಿಂದ ನೀತಿಯ ಗರ್ಭದಲ್ಲಿಯೂ ರಸಪಾಕಗೊಳಿಸುವ ಜಾಣ್ಮೆಯಿಂದ ಈ ವಿವಿಧ ಕಥೆಗಳಲ್ಲಿ ವಿಸ್ತರಿಸಿದೆ. ಪಾಪನ ಮದುವೆ, ಮರದ ಬೊಂಬೆ, ಕೊನೆಯ ಕಾಡಿನ ಕಥೆ ಇವು ಮೂರು ಅವರ ಪರಿಪಕ್ವ ಪರಿಪಾಕೋನ್ಮುಖ ಸ್ವಾಭಾವಿಕ ಕಥಾ ಕೌಶಲ್ಯದ ಕುರುಹುಗಳಾಗಿ ಉಳಿಯಬಲ್ಲವು ಎಂದಿದ್ದಾರೆ"[2]

"ಜೀವನ ಪ್ರೀತಿ" ಡಾಕ್ಟರ್ ಕಾಳೇಗೌಡ ನಾಗವಾರ ರವರು ಕೊಡಗಿನ ಗೌರಮ್ಮನವರು ಬರೆದ ಎಲ್ಲ ಕಥೆಗಳನ್ನು ಸಂಪಾದಿಸಿದ ಸಂಕಲನವಾಗಿದೆ. ಕಾಳೇಗೌಡ ರವರು ಕಥೆಗಳ ಸಂಕಲನದ ಕುರಿತು ಹೇಳುತ್ತಾ 'ಗೌರಮ್ಮನವರು ಕನ್ನಡ ಕಥಾಲೋಕ ಕಂಡ ಸಂವೇದನಾಶೀಲ ಕಥೆಗಾರ್ತಿ. ಮೇಲ್ಜಾತಿಯ ಸುಶಿಕ್ಷಿತ ಮಧ್ಯಮ ವರ್ಗದಲ್ಲಿ ಜನಿಸಿದ ಮಲೆನಾಡಿನ ಕಥೆಗಾರ್ತಿ. ವಿಧವಾ ಸಮಸ್ಯೆ, ಹದಿಹರೆಯದವರ ಪ್ರೇಮ, ಕೌಟುಂಬಿಕ ಪ್ರೀತಿ, ಅಲ್ಲಿನ ಮಾನವೀಯ ಸಂಬಂಧಗಳು, ರಕ್ಷಣೆ, ಜಾತಿ ಸಂಘರ್ಷ ಮುಂತಾದ ಹತ್ತು ಹಲವು ಕಡುವಾಸ್ತವಗಳು ಗೌರಮ್ಮನವರ ಕಿರಿದಾದ ಕಥೆಗಳ ಆವರಣದಲ್ಲಿ ಅತ್ಯಂತ ನವಿರಾಗಿ ಚಿತ್ರಣಗೊಂಡಿವೆ. ಎಲ್ಲ ಕಥೆಗಳ ಕೇಂದ್ರ ಕಾಳಜಿಯಾಗಿ ಮಹಿಳೆಯೇ ರೂಪಗೊಂಡಿದ್ದಾಳೆ. ಕೌಟುಂಬಿಕ–ಸಾಮಾಜಿಕ ಸಮಸ್ಯೆಗಳು ಗೌರಮ್ಮನವರ ಕಥೆಗಳ ದ್ರವ್ಯವಾಗಿದೆ' ಎಂದಿದ್ದಾರೆ. ಹೀಗೆ ಸಮಾಜದಲ್ಲಿರುವ ಎಲ್ಲಾ ಸ್ತ್ರೀಯರ ಸಮಸ್ಯೆಯನ್ನು ಗೌರಮ್ಮನವರು ತಮ್ಮ ಕಥೆಗಳಲ್ಲಿ ಬರೆದಿರುವುದನ್ನು ಕಾಣಬಹುದು.

**ಅನುಪಮಾ ನಿರಂಜನ**

ಅನುಪಮಾ ನಿರಂಜನ ರವರು ಕೊಡಗಿನ ಗೌರಮ್ಮ, ಶ್ಯಾಮಲಾದೇವಿ, ಸರಸ್ವತಿ ರಾಜವಾಡೆ ಯವರ ನಂತರದಲ್ಲಿ ಬಂದವರು. ಇವರು ಕಣ್ಮಣಿ, ರುವಾರಿಯ ಲಕ್ಷ್ಮೀ, ನೀರಿಗೆ ನೈದಿಲೆ ಶೃಂಗಾರ, ಏಳು ಸುತ್ತಿನ ಮಲ್ಲಿಗೆ, ಹೃದಯ ಸಮುದ್ರ, ಗಿರಿಧಾಮ, ಒಡಲು, ಪುಷ್ಪಕ, ಒಂದು ಗಿಣಿಯ ಕಥೆ ಮುಂತಾದ ಕಥಾಸಂಕಲನಗಳನ್ನು ರಚಿಸಿದ್ದಾರೆ. ಹಿಂದಿನ ಲೇಖಕಿಯರು ಈ ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣಿಗೆ ಆಗುವ ಅಪಚಾರ ಮತ್ತು ಅನ್ಯಾಯಗಳನ್ನು ಚಿತ್ರಿಸಿದರು. ಆದರೆ ಹೆಣ್ಣಿನ ದುರಂತದ ನೈಜ ಕಾರಣಗಳನ್ನು ತಿಳಿಯದೆ ಹೋದರು. ಹೆಣ್ಣಿನ ಬಾಳು ಕಣ್ಣೀರು. ಆದರೆ ಕಣ್ಣೀರಿಗೆ ಕಾರಣ ನಿಜವಾಗಿಯೂ ಎಲ್ಲಿದೆ? ಅದಕ್ಕೆ ಪರಿಹಾರವೇನು? ಎಂಬ ಪ್ರಶ್ನೆಗಳಿಗೆ ಕಥೆಗಳಲ್ಲಿ

ಉತ್ತರವಿಲ್ಲ. ಅನುಪಮಾ ನಿರಂಜನ ಅವರು ಈ ಸಮಸ್ಯೆಗಳನ್ನು ಅಂದರೆ ಸ್ತ್ರೀಯರ ಸಮಸ್ಯೆಗಳನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದಾರೆ. ನಮ್ಮ ಸಮಾಜದ ಆರ್ಥಿಕ ವಿಸಮತೆಯ ಗರ್ಭದಲ್ಲಿ ಹುದುಗಿ ಹೋದ ಇದರ ಎಳೆಗಳನ್ನು ಸೂಕ್ಷ್ಮವಾಗಿ ಶೋಧಿಸಿ ನೋಡಿದ್ದಾರೆ. ಇದು ಪಾಳೆಗಾರ ಪದ್ಧತಿಯ ಶೃಂಕಲೆಗಳಲ್ಲಿ ಸಿಕ್ಕು ತೊಳಲುತ್ತಿರುವ ಸಮಾಜ. ಈ ಪದ್ಧತಿ ನಾಶಪಡಿಸದ ಹೊರತು ಹೆಣ್ಣಿಗೆ ಮುಕ್ತಿ ಇಲ್ಲ. ಅವಳ ಬಾಳು ಸಹಜವಾಗಿ ಅರಳಿ ತನ್ನ ಪರಿಮಳವನ್ನು ನಾಲ್ಕು ಕಡೆಗೆ ನವಿರಾಗಿ ಬೀರುವುದಿಲ್ಲ ಎಂಬುದನ್ನು ಅನುಪಮ ರವರು ಮನಗಂಡಿದ್ದಾರೆ.

"ನೀರಿಗೆ ನೈದಿಲೆ ಶೃಂಗಾರ" ಕಥೆಯಲ್ಲಿ ತಾಯ್ತನದಿಂದ ದೂರವಿರಬೇಕೆಂದಿದ್ದ ನಾಯಕಿಯರು ಕ್ರಮೇಣ ತಾಯ್ತನದ ಕಡೆಗೆ ವಾಲುತ್ತಾರೆ. ಇಲ್ಲಿ ವೈಯಕ್ತಿಕ ಅನುಭವ, ಸ್ವಭಾವಗಳ ಹಿನ್ನೆಲೆಯಲ್ಲಿ ತಾಯ್ತನದಿಂದ ದೂರವಿರುವಂತೆ ಮಾಡುತ್ತದೆ. ಮೊದಲು ತಾಯ್ತನ ಪ್ರಧಾನವಾಗಿದ್ದು ವೃತ್ತಿ ಗೌಣವಾಗಿದೆ. ನಂತರ ವೃತ್ತಿ ಪ್ರಧಾನವಾಗಿ ತಾಯ್ತನ ಗೌಣವಾಗುವುದು ಕಂಡು ಬರುತ್ತದೆ.

"ಒಡಲು" ಈ ಕಥೆಯಲ್ಲಿ ಶ್ರೀಮಂತಿಕೆ ಹಾಗೂ ಬಡತನದಿಂದ ಬಂದಿದ್ದ ಇಬ್ಬರು ತಾಯಿಯರ ತಾಯ್ತನವನ್ನು ಕುರಿತದ್ದಾಗಿದೆ. "ತಾಯ್ತನದ ತ್ಯಾಗ ಮತ್ತು ತನ್ಮಯತೆಯಲ್ಲಿ ಇಬ್ಬರೂ ಎತ್ತರದವರೇ. ಆದರೂ ಬಡವೆ ಕಳೆದುಕೊಂಡ ತನ್ನ ಮಗುವನ್ನು, ಅವನ ಮೂತ್ರಪಿಂಡವನ್ನು ಪಡೆದು ಬದುಕಿದ ಶ್ರೀಮಂತಳು. ಮಗನಲ್ಲಿಯೇ ಕಂಡುಕೊಂಡ ದೊಡ್ಡಸ್ತಿಕೆಯನ್ನು ಎದ್ದು ಕಾಣುವಂತೆ"[3] ಈ ಕಥೆಯಲ್ಲಿ ಚಿತ್ರಿಸಲಾಗಿದೆ.

"ಒಂದು ಘಟನೆ ಮತ್ತು ಅನಂತರ" ಈ ಕಥೆಯು ಅನುಪಮಾ ರವರ ಪ್ರಾರಂಭದ ಕಥೆಯಲ್ಲವಾದರೂ ಪ್ರಗತಿ ಮನೋಧರ್ಮದ ಪ್ರಾತಿನಿಧಿಕ ಅಭಿವ್ಯಕ್ತಿಯಾಗಿದೆ. ಈ ಕಥೆಯಲ್ಲಿ ನಡೆಯುವ ಘಟನೆಯು ಒಬ್ಬ ವಿವಾಹಿತ ಸ್ತ್ರೀಯ ಮೇಲೆ ನಡೆಯುವ ಬಲತ್ಕಾರವಾಗಿದೆ. ಈ ಘಟನೆಗೆ ಅವಳ ಪತಿಯು ಸಾಕ್ಷಿಯಾಗಿರುತ್ತಾನಲ್ಲದೆ ಒಂದು ರೀತಿಯಲ್ಲಿ ಅವನೇ ಹೊಣೆಗಾರನು ಆಗಿರುತ್ತಾನೆ. ಇಲ್ಲಿ ಕಥೆಗಾರ್ತಿಗೆ ಪ್ರಸ್ತುತವಾದದ್ದು ಈ ಘಟನೆಯ ವಿವರಗಳಲ್ಲ, ಅದರ ಪರಿಣಾಮಗಳಾಗಿವೆ. ಘಟನೆಯ ಪರಿಣಾಮ ಕ್ರಾಂತಿಕಾರವಾಗುವುದು ಅತ್ಯಾಚಾರವನ್ನು ಅನುಭವಿಸಿದ ಹೆಣ್ಣಿನಲ್ಲಿ. ತನ್ನ ಹೆಂಡತಿಯನ್ನು ರಕ್ಷಿಸಲಾಗದ ಇವನು ಗಂಡಸೆ ಎಂಬ ಅವಳ ಪ್ರಶ್ನೆಯ ಸ್ವರೂಪವೇ ಮೂಲಭೂತವಾದದ್ದು. ಮನೆ ಬಿಟ್ಟು ಹೋಗುವುದೇ ನಿರ್ಧಾರವಾಗುತ್ತದೆ. ಈ ಕಥೆಯಲ್ಲಿ ಸಂಬಂಧಗಳಲ್ಲಿ ಅರ್ಥವೇನಿದೆ ಎನ್ನುವ ಪ್ರಶ್ನೆಯು ಕತೆಯ ಕೇಂದ್ರದಲ್ಲಿ ಕಂಡುಬರುತ್ತದೆ.

**ತ್ರಿವೇಣಿ**

ತ್ರಿವೇಣಿ ಯವರು ಕನ್ನಡದ ಶ್ರೇಷ್ಠ ಕತೆಗಾರ್ತಿಯಾಗಿದ್ದಾರೆ. "ಅಪರೂಪವಾಗಿ ಕೃತಿ ರಚಿಸುತ್ತಿದ್ದ ಕಾಲದಲ್ಲಿ ತ್ರಿವೇಣಿ ಅವರು ಮನೋವೈಜ್ಞಾನಿಕ ಸಮಸ್ಯೆಗಳನ್ನು ಎತ್ತಿಕೊಂಡು ಅವುಗಳಿಗೆ ಕಥನ ರೂಪ ಕೊಟ್ಟಾಗ ಕನ್ನಡ ಸಾಹಿತ್ಯದಲ್ಲಿ ಹೊಸ ಬದಲಾವಣೆಗಳಾದವು. ಇವರು ಹೆಂಡತಿಯ ಹೆಸರು, ಎರಡು ಮನಸ್ಸು, ಸಮಸ್ಯೆಯ ಮಗು, ಕೊನೆಯ ನಿರ್ಧಾರ ಹೀಗೆ ಅನೇಕ ಕಥೆಗಳನ್ನು ರಚಿಸಿದ್ದಾರೆ. ತ್ರಿವೇಣಿಯವರ "ಕೊನೆಯ ನಿರ್ಧಾರ" ಕಥೆಗೂ ಅನುಪಮಾ ನಿರಂಜನ ರವರ "ಒಂದು ಘಟನೆ ಹಾಗೂ ಅನಂತರ" ಕಥೆಗೂ ಸಾಮ್ಯತೆಗಳಿವೆ. ತ್ರಿವೇಣಿಯವರ ಈ ಕಥೆಯು ಅನುಪಮಾ ರವರ ಕಥೆಯ ಮುಂದುವರಿದ ಭಾಗ ಎಂದು ಹೇಳಬಹುದು. ಅನುಪಮಾ ರವರ ಕಥೆಯಲ್ಲಿ ಹೆಂಡತಿಯ ಮೇಲೆ ಬಲತ್ಕಾರವಾದರೂ ರಕ್ಷಿಸಿಕೊಳ್ಳದ ಗಂಡ, ಒಂದು ರೀತಿಯಲ್ಲಿ ಆ ಘಟನೆಗೆ ಅವನೇ ಕಾರಣನಾಗಿರುತ್ತಾನೆ. ಅದೇ ರೀತಿ ತ್ರಿವೇಣಿಯವರ ಕಥೆಯಲ್ಲಿ ಗಂಡ ತನ್ನ ಹೆಂಡತಿಯ ಶೀಲವನ್ನು ಶಂಕಿಸಿ ಅವಳನ್ನು ಮನೆಯಿಂದ ಹೊರ ದೂಡಿ ಬೇರೆ ಮದುವೆ ಮಾಡಿಕೊಳ್ಳುತ್ತಾನೆ. ನಂತರ ಹೆಂಡತಿ ತನ್ನ

ಕಾಲ ಮೇಲೆ ನಿಂತು ಜೀವನ ನಡೆಸುತ್ತಾಳೆ. ಹಲವು ವರ್ಷಗಳಾದ ನಂತರ ಗಂಡನಿಂದ ಕರೆ ಬಂದರೂ ಅವಳು ನಿರಾಕರಿಸುತ್ತಾಳೆ. ಅದೇ ಅವಳ ಕೊನೆಯ ನಿರ್ಧಾರವು ಆಗಿರುತ್ತದೆ. ಹೀಗೆ ತ್ರಿವೇಣಿಯವರು ಸಮಾಜದಲ್ಲಿ ಹೆಣ್ಣಿನ ಮೇಲೆ ನಡೆಯುವ ಶೋಷಣೆಯನ್ನು ಕಥೆ ಮತ್ತು ಕಾದಂಬರಿಗಳಲ್ಲಿ ನೀರ್ಬಿಡೆಯಿಂದ ಚಿತ್ರಿಸಿದ್ದಾರೆ.

**ಡಾ. ವೀಣಾ ಶಾಂತೇಶ್ವರ**

ಇವರು ಕನ್ನಡ ಸಾಹಿತ್ಯ ಲೋಕದ ದಿಟ್ಟ ಬರಹಗಾರ್ತಿ ಮತ್ತು ಪ್ರಮುಖ ಸ್ತ್ರೀಪರ ಕಾಳಜಿಯುಳ್ಳ ಕತೆಗಾರ್ತಿಯಾಗಿದ್ದಾರೆ. ಇವರು ಮುಳ್ಳುಗಳು, ಕವಲು, ಕೊನೆಯ ದಾರಿ, ಹಸಿವು, ಬಿಡುಗಡೆ ಮುಂತಾದ ಕಥಾ ಸಂಕಲನಗಳನ್ನು ಬರೆದಿದ್ದಾರೆ. ಈ ಕಥಾ ಸಂಕಲನಗಳಲ್ಲಿನ ಕಥೆಗಳು ಸ್ತ್ರೀಪರ ಚಿಂತನೆಗಳನ್ನು ಒಳಗೊಂಡಿವೆ.

ಇವರ ಸಂವೇದನೆ, ವಸ್ತು, ಶೈಲಿ, ಆಕೃತಿ ಹಿಂದಿನ ಮಹಿಳಾ ಸಾಹಿತಿಗಳಿಗಿಂತ ಭಿನ್ನವಾದ ನವ್ಯ ಮಾರ್ಗವನ್ನು ಹಿಡಿದಿದ್ದಾರೆ. ಶಾಂತಿನಾಥ ದೇಸಾಯಿ ಅವರ ಪ್ರಭಾವ ವೀಣಾ ರವರ ಕಥೆಗಳಲ್ಲಿದೆ. ಲೈಂಗಿಕ ಆಸ್ಥೆಗಳು, ನಗರ ಸಂವೇದನೆ, ಅನುಭವದ ಆದ್ಯತೆಗಳನ್ನು ಇವರ ಕಥಾಸಂಕಲನದಲ್ಲಿ ಗಮನಿಸಬಹುದು. "ಮುಳ್ಳುಗಳು" ಕಥಾಸಂಕಲನದಲ್ಲಿ ಒಟ್ಟು ಒಂಭತ್ತು ಕಥೆಗಳಿವೆ. ಈ ಕಥಾ ಸಂಕಲನದಲ್ಲಿ ಸ್ತ್ರೀ ಸಂವೇದನೆ, ಮಧ್ಯಮ ವರ್ಗದ ಮಹಿಳೆಯರ ಮಾನಸಿಕ ಸಂಘರ್ಷ, ಸಮಾಜದಲ್ಲಿನ ಸಾಂಪ್ರದಾಯಿಕ ಚೌಕಟ್ಟುಗಳ ನಡುವೆ ಅವಳ ಸ್ವಾತಂತ್ರ್ಯದ ಹುಡುಕಾಟ, ಲಿಂಗ ತಾರತಮ್ಯದ ಮುಖಗಳು ಈ ಕಥಾ ಸಂಕಲನದಲ್ಲಿ ಅನಾವರಣಗೊಂಡಿವೆ. ಗಂಡಿನ ಸ್ವಾರ್ಥ, ಅಧಿಕಾರ ಲಾಲಸೆ, ಕ್ರೌರ್ಯ, ಮೋಸದ ತೀವ್ರತೆಯ ಅರಿವಿದ್ದರೂ ಪುರುಷ ದ್ವೇಷಿಗಳಲ್ಲ. ವೀಣಾರ ಕತೆಗಳಲ್ಲಿ ಪ್ರೀತಿಯ ಹಂಬಲವಿದೆ. ನೆನಪುಗಳಿಗೆ ಮಹತ್ವವನ್ನು ಕೊಟ್ಟಿದ್ದಾರೆ. ಇವರು ನಿರಾಶವಾದಿಗಳಲ್ಲ. ಇವರು ಬದುಕನ್ನು ಪ್ರೀತಿಸುವವರಾಗಿದ್ದಾರೆ.

**"ಕವಲು"** ಕಥಾ ಸಂಕಲನದಲ್ಲಿ ಹೆಣ್ಣು ಸ್ವಾತಂತ್ರ್ಯಕ್ಕಾಗಿ ಹಂಬಲಿಸುವುದು, ಸಾಂಪ್ರದಾಯಿಕ ಚೌಕಟ್ಟು ಮತ್ತು ಹೆಣ್ಣಿನ ಸ್ವಾಭಿಮಾನದ ನಡುವಿನ ಸಂಘರ್ಷ ನಡೆದು ನಂತರ ಹೆಣ್ಣು ಬದುಕಿನ ಕೆಲವು ವಾಸ್ತವಗಳನ್ನು ನಿರಾಕರಿಸಿ ತನ್ನ ಅಸ್ಮಿತೆಯನ್ನು ಕಂಡುಕೊಳ್ಳುವ ಕಥಾ ವಸ್ತುವನ್ನು ಈ ಕಥಾ ಸಂಕಲನದಲ್ಲಿ ಕಂಡುಬರುವುದು.

**"ಹಸಿವು"** ಕಥಾ ಸಂಕಲನದಲ್ಲಿ ಒಟ್ಟು ಏಳು ಕಥೆಗಳಿವೆ. ಪಿ ಲಂಕೇಶರವರು ಈ ಕಥಾ ಸಂಕಲನಕ್ಕೆ ಮುನ್ನುಡಿ ಬರೆಯುತ್ತಾ ತಮ್ಮ ಅಭಿಪ್ರಾಯವನ್ನು ಈ ರೀತಿ ವ್ಯಕ್ತಪಡಿಸಿದ್ದಾರೆ. 'ಇವರ ಕಥೆಗಳಿಗಿಂತ ಹೆಚ್ಚಾಗಿ ಈ ಕಥೆಗಳ ಹಿಂದಿನ ಪ್ರಜ್ಞೆ ಹೆಚ್ಚು ಸ್ವಾರಸ್ಯವಾದದ್ದು. ಒಬ್ಬ ವ್ಯಕ್ತಿಯ ಮನಸ್ಸಿನ ಅನಿಸಿಕೆಗಳನ್ನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುವ ಧೈರ್ಯ ಮತ್ತು ಆ ಆಳಕ್ಕೆ ಬೆಳೆಯುವ ಕುತೂಹಲ ಇಲ್ಲಿದೆ. ಇದರ ಜೊತೆಗೆ ತೀವ್ರವಾದ ಭಾವನೆಗಳನ್ನು ಅದೇ ಸ್ಥಿತಿಯಲ್ಲಿ ಹಿಡಿದಿಡಬಲ್ಲ ಶೈಲಿಯನ್ನು ಈ ಲೇಖಕಿ ಸಾಧಿಸಿಕೊಂಡಿದ್ದಾರೆ' ಎಂದು ಕಥೆಗಳ ಆಶಯವನ್ನು ವ್ಯಕ್ತಪಡಿಸಿದ್ದಾರೆ.

**ನೇಮಿಚಂದ್ರ.**

ಇವರು ಕನ್ನಡದ ವೈಶಿಷ್ಟ ಪೂರ್ಣ ಬರಹಗಾರ್ತಿಯಾಗಿದ್ದಾರೆ. ನಮ್ಮ ಕನಸುಗಳಲ್ಲಿ ನೀವಿದ್ದೀರಿ, ಮತ್ತೆ ಬರೆದ ಕಥೆಗಳು, ಕಳೆಯಬೇಕಿದೆ ನಿನ್ನ ಜೊತೆಯಲಿ, ಒಂದು ಶ್ಯಾಮಲ ಸಂಜೆ, ನೇಮಿಚಂದ್ರರ ಕಥೆಗಳು ಮುಂತಾದ ಕಥಾ ಸಂಕಲನಗಳನ್ನು ಬರೆದಿದ್ದಾರೆ.

**"ಹೊಸ ಹುಟ್ಟು"** ನೇಮಿಚಂದ್ರರ ಮಹತ್ವದ ಕತೆಯಾಗಿದೆ. ತಾಯ್ತನದ ಸಮಸ್ಯೆಯು ಸ್ತ್ರೀ ಪ್ರಜ್ಞೆಯನ್ನು ಆಳವಾಗಿ ಪ್ರಭಾವಿಸಿರುವ ಸಮಸ್ಯೆಗಳಲ್ಲಿ ಒಂದಾಗಿದೆ. ಈ ಸಮಸ್ಯೆಗೆ ಹಲವು ಆಯಾಮಗಳಿರುವುದರಿಂದ ಅದಕ್ಕೆ ಸುಲಭ

ಪರಿಹಾರವಿಲ್ಲ. ಈ ಸಮಸ್ಯೆಯನ್ನು ಅದರ ಎಲ್ಲಾ ಸಂಕೀರ್ಣತೆಗಳೊಂದಿಗೆ ಎದುರಿಸುವ ಮೂಲಕ ನೇಮಿಚಂದ್ರರ ಹೊಸ ಹುಟ್ಟು ಕಥೆಯು ಮಹತ್ವವನ್ನು ಪಡೆದುಕೊಂಡಿದೆ. ಈ ಕಥೆಯಲ್ಲಿ ಚಿತ್ರ ಕಲಾವಿದೆ ಶಶಿಕಲಾಳನ್ನು ಗಂಡ ರಮೇಶ ಆಕೆಯ ಸೃಜನಶೀಲತೆಯನ್ನು ಗೌರವಿಸುತ್ತಾನೆ. ಅವಳಲ್ಲಿ ಜಾಗೃತವಾಗಿರುವಂತೆ ನೋಡಿಕೊಳ್ಳುತ್ತಾನೆ. ಮದುವೆಯಾಗಿ ನಾಲ್ಕಾರು ವರ್ಷಗಳಾದರೂ ಮಕ್ಕಳಾಗುವುದಿಲ್ಲ. ಅದರ ಬಗ್ಗೆ ಅವರು ಚಿಂತಿಸುವುದಿಲ್ಲ. ನೆರೆಹೊರೆಯವರು, ಬಂಧು–ಬಳಗದವರ ಪ್ರಶ್ನೆಗಳು ಇವೆ ಎಂದಾಗ ಗೊಂದಲಕ್ಕೊಳಗಾಗುತ್ತಾಳೆ. ನಂತರ ವೈದ್ಯರಲ್ಲಿ ತೋರಿಸಿ ಚಿಕಿತ್ಸೆ ಪಡೆದರು ಅದರಿಂದ ಪ್ರಯೋಜನವಾಗಲಿಲ್ಲ. ಕೊರಗು ಉಳಿದೆ ಬಿಡುವುದನ್ನು ಗಮನಿಸುವ ಮೂಲಕ ಹೆಚ್ಚಿನ ಸಂಕೀರ್ಣತೆಯನ್ನು ಪಡೆಯುತ್ತದೆ. ಮಾತೃತ್ವದ ಅನುಭವಕ್ಕೆ ತಾನು ವಂಚಿತಳಾಗಿದ್ದೇನೆ ಎನ್ನುವುದು ಶಶಿಕಲಾಳನ್ನು ಕಾಡುತ್ತಲೆ ಇರುವುದು. ಇಲ್ಲಿ ಕಥೆಗಾರ್ತಿಯ ಅನುಭವದ ಪ್ರಾಮಾಣಿಕತೆಯನ್ನು ಎತ್ತಿ ತೋರಿಸುತ್ತದೆ.

**ಕಮಲಾ ಹಂಪನಾ**

ಕಮಲಾ ಹಂಪನಾ ರವರು ಆಧುನಿಕ ಶ್ರೇಷ್ಠ ಕಥೆಗಾರ್ತಿಯಾಗಿದ್ದಾರೆ. ನಕ್ಕಿತು ಹಾಲಿನ ಬಟ್ಟಲು, ರೆಕ್ಕೆ ಮುರಿದಿತ್ತು, ಚಂದನ ಮತ್ತು ಬಣವೆ ಮುಂತಾದ ಕಥಾಸಂಕಲನಗಳನ್ನು ಬರೆದಿದ್ದಾರೆ. ಇವರು 'ನಕ್ಕಿತು ಹಾಲಿನ ಬಟ್ಟಲು' ಕಥಾಸಂಕಲನದಲ್ಲಿ ಮಹಿಳೆಯರ ಆಂತರಿಕ ಜಗತ್ತು, ಹೊರ ನೋವುಗಳು, ಕೌಟಿಂಬಿಕ ಸವಾಲುಗಳು, ಸಾಮಾಜಿಕ ವಾಸ್ತವದಲ್ಲಿ ಮಹಿಳೆಯರ ಸೂಕ್ಷ್ಮತೆಗಳನ್ನು ಅತ್ಯಂತ ನಯವಾಗಿ ಚಿತ್ರಿಸಿದ್ದಾರೆ. ವಿದ್ಯಾರ್ಥಿಯಾಗಿದ್ದಾಗಲೇ ಸಮಾಜದಲ್ಲಿ ಪುರುಷರಿಗೆ ಸಮಾನವಾಗಿ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿರುವುದನ್ನು ಹೇಳಿಕೊಂಡಿದ್ದಾರೆ. "ನಾನು ಆರನೇ ತರಗತಿಯಲ್ಲಿ ಓದುತ್ತಿದ್ದೆ. ದೇಶದಲ್ಲಿ ಸ್ವಾತಂತ್ರ್ಯ ಚಳುವಳಿ ಬಿರುಸಾಗಿ ನಡೆಯುತ್ತಿದ್ದ ಕಾಲವದು. ಪ್ರತಿದಿನವೂ ಶಾಲೆಯಿಂದ ಹೊರಟ ಮೆರವಣಿಗೆಯಲ್ಲಿ ಬಿಳಿ ಹುಡುಪು ಧರಿಸಿ ದೇಶಭಕ್ತಿ ಗೀತೆಗಳನ್ನು ಹಾಡುತ್ತಾ ಸಾಗುತ್ತಿದ್ದೆ. ಅಲ್ಲಿದ್ದಾಗಲೇ ಸ್ವಾತಂತ್ರ್ಯ ಬಂದದ್ದು. ಆಗ ನಾನು ಯೋಚಿಸಿದ್ದೆ; ನಾನು ದೇಶದ ಹೋರಾಟದಲ್ಲಿ ಭಾಗಿಯಾಗಿದ್ದೆ. ಪ್ರತಿ ದಿನ ಹಾಡುತ್ತ ಮೆರವಣಿಗೆಯಲ್ಲಿ ಹೋಗಿಲ್ಲವೇ? ಅದೇನು ಸಾಮಾನ್ಯ ಕೆಲಸವೇ? ಆದ್ದರಿಂದ ನಾನು ಒಬ್ಬ ದೇಶಭಕ್ತಿ ಎಂದು ಬಿಗಿದ್ದೆ"[5] ಎಂದು ಕಮಲಾ ಅವರು ಪುರುಷರಿಗೆ ಸಮಾನವಾಗಿ ಮಹಿಳೆಯರು ಕೆಲಸ ಮಾಡಬಹುದು ಎಂಬುದನ್ನು ತೋರಿಸಿಕೊಟ್ಟಿದ್ದಾರೆ.

**ಬಿ. ಟಿ. ಲಲಿತಾ ನಾಯಕ್**

ಬಿ. ಟಿ. ಲಲಿತಾ ನಾಯಕ್‌ರವರು ಸಹ ಕನ್ನಡದ ಶ್ರೇಷ್ಠ ಮಹಿಳಾ ಕಥೆಗಾರ್ತಿಯಾಗಿದ್ದಾರೆ. ಇವರು ರಚಿಸಿದ "ಹಬ್ಬ ಮತ್ತು ಹುಲಿ" ಪ್ರಸಿದ್ಧ ಕಥಾಸಂಕಲನವಾಗಿದೆ. ಈ ಕಥಾಸಂಕಲನದಲ್ಲಿ ಮುಖ್ಯವಾಗಿ ಜಾತೀಯತೆ, ಮೇಲ್ವರ್ಗದವರ ಆಚರಣೆ, ಶೋಷಿತ ವರ್ಗದವರ ಕಣ್ಣೀರು, ಬಲಿದಾನ, ಮತ್ತು ಮಹಿಳಾ ಶೋಷಣೆಯನ್ನು ಈ ಕಥಾಸಂಕಲನವು ಪ್ರತಿಬಿಂಬಿಸುತ್ತದೆ.

**ವಿನಯಾ ಒಕ್ಕುಂದ**

ಇವರು ಸಹ ಶ್ರೇಷ್ಠ ಕಥೆಗಾರ್ತಿಯಾಗಿ ಗುರುತಿಸಿಕೊಂಡಿದ್ದಾರೆ.. "ಊರ ಒಳಗಡೆ ಬಯಲು" ಇವರ ಶ್ರೇಷ್ಠ ಕಥಾಸಂಕಲನವಾಗಿದೆ. ಈ ಕಥೆಯು ಹನ್ನೆರಡನೆಯ ಶತಮಾನದ ಶರಣೆ ಬೊಂತಾದೇವಿಯ ವಚನದಿಂದ ಪ್ರೇರಣೆಗೊಂಡಿದೆ. ಈ ಕಥೆಯಲ್ಲಿ ಲೇಖಕಿಯರು ಸಮಾಜದಲ್ಲಿ ಸೃಷ್ಟಿಸಿರುವ ಜಾತಿ, ವರ್ಗ, ಲಿಂಗಬೇಧಗಳ ಆಚೆಗಿರುವ ಮಾನವೀಯ ಅಂತಃಕರಣ ಮತ್ತು ಸಮಾನತೆಯನ್ನು ಪ್ರತಿಬಿಂಬಿಸುವ ಕಥಾಸಂಕಲನ ವಾಗಿದೆ.

**ಸಮಾರೋಪ**

ಆಧುನಿಕ ಕನ್ನಡ ಕಥಾಸಾಹಿತ್ಯದಲ್ಲಿ ಮಹಿಳಾ ಸಂವೇದನೆಯು ಅತ್ಯಂತ ಪ್ರಮುಖ ಪ್ರಭಾವಶಾಲಿ

ಪ್ರತಿಭಟನೆಯಾಗಿದೆ. ಇದು ಮಹಿಳೆಯ ಮೇಲೆ ನಡೆಯುವ ಶೋಷಣೆ, ಅಸಮಾನತೆ ಮತ್ತು ಸಾಮಾಜಿಕ ಅನ್ಯಾಯಗಳ ವಿರುದ್ಧ ದನಿ ಎತ್ತುವ ಮೂಲಕ ಸಾಹಿತ್ಯ ಚರಿತ್ರೆಯನ್ನೇ ಬದಲಾಯಿಸಿದೆ. ಮಹಿಳೆಯರು ತಾವು ಸಮಾಜದಲ್ಲಿ ಅನುಭವಿಸಿರುವ ನೋವುಗಳನ್ನು ತಮ್ಮ ಕಥೆಗಳ ಮೂಲಕ ಮಹಿಳಾ ಸಂವೇದನೆಯನ್ನು ವ್ಯಕ್ತಪಡಿಸಿದರೆ ಅದನ್ನು ಪುರುಷ ಸಾಹಿತಿಗಳು ತಮ್ಮ ಮುಕ್ತ ಮನಸ್ಸಿನಿಂದ ವಿಮರ್ಶಿಸಿದ್ದಾರೆ.

**ಕೊನೆಟಿಪ್ಪಣಿಗಳು**

1. ಭಗವತಿ, ಎಸ್.ಎಸ್ ಮತ್ತು ಎಚ್. ಎಸ್. ಮೇಲಿನಮನಿ. (2002). *ಹೊಸಗನ್ನಡ ಸಾಹಿತ್ಯಾವಲೋಕನ.* ಪು.ಸಂ– 182
2. ಅದೇ. ಪುಟ 188
3. ಅದೇ. ಪುಟ 246
4. ಅದೇ. ಪುಟ 183
5. ನಿರ್ಮಲ ಪಿ ಯಲಿಗಾರ ಮತ್ತು ಕಿರಣ ಪ್ರಸಾದ್ ರಾಜನಹಳ್ಳಿ. (2012). *ಗರಿ ಅನನ್ಯ ಸಾಧಕಿಯರು.* ಪುಟ 59

**ಪರಾಮರ್ಶನ ಗ್ರಂಥಗಳು**


- ಭಗವತಿ, ಎಸ್.ಎಸ್ ಮತ್ತು ಎಚ್. ಎಸ್. ಮೇಲಿನಮನಿ. (2002). *ಹೊಸಗನ್ನಡ ಸಾಹಿತ್ಯಾವಲೋಕನ.* ವಿದ್ಯಾನಿಧಿ ಪ್ರಕಾಶನ.
- ಕಲಬುರ್ಗಿ, ಎಂ.ಎಂ. (ಸಂ.). (2016). *ಬಸವಯುಗದ ವಚನ ಮಹಾಸಂಪುಟ.* ಕನ್ನಡ ಪುಸ್ತಕ ಪ್ರಾಧಿಕಾರ,
- ಕೊಕ್ಕನವರ, ವಾಯ್. ವಾಯ್. (2016). *ಕನ್ನಡ ಸಾಹಿತ್ಯ ಚರಿತ್ರೆಯ ಹೆಜ್ಜೆಗಳು.* ಸೌಮ್ಯ ಪ್ರಕಾಶನ.
- ನಿರ್ಮಲ ಪಿ ಯಲಿಗಾರ ಮತ್ತು ಕಿರಣ ಪ್ರಸಾದ್ ರಾಜನಹಳ್ಳಿ. (2012). *ಗರಿ ಅನನ್ಯ ಸಾಧಕಿಯರು.* ಸ್ನೇಹ ಬುಕ್ ಹೌಸ್,
- ಶಿವಾನಂದ ಕೆಳಗಿನಮನಿ. (2011). *ಬಂಡಾಯಸಾಹಿತ್ಯ.* ಚೇತನ ಬುಕ್ ಹೌಸ್.
- ಸುಭಾಶ್ಚಂದ್ರ ಕಶಟ್ಟಿ ಬಾಚಿನಾಳ. (2018). *ಶ್ರೀ ಬಸವಣ್ಣನವರ ಆತ್ಮ–ಸಂವೇದನೆ.* ಬಸವ ಪ್ರಕಾಶನ.